# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಭಟ್ಕಳ

**ಸಿ.ಸಿ. ನಂ. 149/2022**
**ಸಿ.ಡಬ್ಲ್ಯೂಃ 6, ಪಿ.ಡಬ್ಲ್ಯೂಃ 8**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಯಾಸೀನ್ ಖಾದಿರ್ ಬಾಷಾ ಶೇಖ್ |
| **ತಂದೆಯ ಹೆಸರು** | : | ಖಾದಿರ್ ಬಾಷಾ ಶೇಖ್ |
| **ವಯಸ್ಸು** | : | 58 ವರ್ಷ |
| **ಉದ್ಯೋಗ** | : | ವ್ಯಾಪಾರ |
| **ವಾಸ** | : | ಮುರ್ಡೇಶ್ವರ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 17-10-2023**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ,**

ಈಗ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ ಅದು ಜಪ್ತು ಪಂಚನಾಮೆ ಇದ್ದು, ಅದನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-9(ಸಿ) ಎಂದು ಗುರುತಿಸಲಾಯಿತು. ನಿಪಿ-9 ಕ್ಕೆ ದಿ.29-11-2019 ರಂದು ಜಪ್ತು ಪಂಚನಾಮೆ ಮಾಡುವಾಗ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಪಂಚನಾಮೆ ಮಾಡುವಾಗ ಸ್ಥಳದಲ್ಲಿ ಮೂರು ಮೊಬೈಲ್ ಫೋನು, ಎ.ಟಿ.ಎಂ. ಕಾರ್ಡು ಮತ್ತು ಒಂದು ಡಬ್ಬಿಯಲ್ಲಿ ಚಿನ್ನದ ಆಭರಣಗಳು, ಒಂದು ಬ್ಯಾಗ್ ಮತ್ತು ಅದರಲ್ಲಿ ಬಟ್ಟೆಗಳು ಇದ್ದವು. ಆಗ ನನ್ನೊಂದಿಗೆ ಇನ್ನೊಬ್ಬ ಇದ್ದ, ಆತನ ಹೆಸರು ನನಗೆ ಗೊತ್ತಿಲ್ಲ. ಪಂಚನಾಮೆಯನ್ನು 1.30 ರಿಂದ 3.30 ರವರೆಗೆ ಮಾಡಲಾಗಿದೆ. ಪಂಚನಾಮೆ ಕಾಲಕ್ಕೆ ರೈಲ್ವೆ ಪೋಲಿಸರು ಇದ್ದರು. ನಂತರ ಪೋಲಿಸರು ನಮ್ಮನ್ನು ಕರೆದುಕೊಂಡು ಮುರ್ಡೇಶ್ವರದ ರೈಲ್ವೆ ನಿಲ್ದಾಣಕ್ಕೆ ಕರೆದುಕೊಂಡು ಹೊಗಿ, ಘಟನಾ ಸ್ಥಳದ ಪಂಚನಾಮೆ ಮಾಡಿ, ಫೋಟೊ, ವಿಡಿಯೋ ತೆಗೆದಿರುತ್ತಾರೆ. ಈಗ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಅದು ಆರೋಪಿ ತೋರಿಸಿದ ಘಟನಾ ಸ್ಥಳದ ಪಂಚನಾಮೆ ಇದ್ದು, ಅದನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು. ನಿಪಿ-5 ರಂತೆ ಪಂಚನಾಮೆಯನ್ನು ಸಂಜೆ 5.00 ರಿಂದ 6.00 ಗಂಟೆಯ ಅವಧಿಯಲ್ಲಿ ಮಾಡಲಾಗಿದೆ. ಪಂಚನಾಮೆ ಕಾಲಕ್ಕೆ ತೆಗೆದ ಫೋಟೊ ನೋಡುತ್ತಿದ್ದು, ಅದರಲ್ಲಿ ನಾನು ಇರುತ್ತೇನೆ. ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದೆ.

ವಶಪಡಿಸಿಕೊಂಡ ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ಪ್ರಕರಣದ ಮುದ್ದೆಮಾಲುಗಳನ್ನು ಪಿರ್ಯಾದಿಯವರ ಮಧ್ಯಂತರ ವಶಕ್ಕೆ ನೀಡಲಾಗಿದೆ. ಅವುಗಳನ್ನು ಈಗಾಗಲೇ ಎಂ.ಓ.–1 ರಿಂದ 20 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ</u> ಎಪಿಪಿಯವರಿಂದಃ**

ಪಂಚನಾಮೆ ಕಾಲಕ್ಕೆ ನಮ್ಮೊಂದಿಗೆ 1 ರಿಂದ 3 ನೇ ಆರೋಪಿತರು ಇದ್ದರು. ಮತ್ತು ಪೋಲಿಸರು ಈ ಪ್ರಕರಣದ ಮುದ್ದೆಮಾಲುಗಳನ್ನು ಅವರೇ ಕದ್ದಿರುತ್ತಾರೆ ಎಂದು ನಮಗೆ ತಿಳಿಸಿರುತ್ತಾರೆ. ದಿ.28–11–2019 ರಂದು ಈ ಪ್ರಕರಣದ ಚಾಸಾ–1 ರವರು ಮುಂಬೈಯಿಂದ ಉಡುಪಿಗೆ ಪ್ರಯಾಣಿಸುತ್ತಿದ್ದಾಗ ಸದರಿ ರೈಲು ಮುರ್ಡೇಶ್ವರದ ಹತ್ತಿರ ಬಂದಾಗ ಆರೋಪಿತರು ಚಾಸಾ–1 ರವರ ಬ್ಯಾಗ್ ಕಳ್ಳತನ ಮಾಡಿ ಪರಾರಿಯಾಗಿರುತ್ತಾರೆ ಎಂದು ತಿಳಿದಿರುತ್ತದೆ ಎಂದರೆ ಸರಿ.

**<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀ ಆರ್.ಜಿ.ಎನ್ ವಕೀಲರಿಂದಃ**

ಸದರಿ ದಿನ ನಾನು ಕಳ್ಳತನ ಆಗುವಾಗ ರೈಲ್ವೇ ನಿಲ್ದಾಣದ ಹತ್ತಿರ ಇದ್ದೆನು. ಆಗ ಆರೋಪಿತರು ಬ್ಯಾಗ್ ತೆಗೆದುಕೊಂಡು ಓಡಿ ಹೋಗುತ್ತಿರುವುದನ್ನು ನಾನು ನೋಡಿರುತ್ತೇನೆ. ಈ ವಿಚಾರವನ್ನು ನಾನು ಪೋಲಿಸರಿಗೆ ಹೇಳಿರುತ್ತೇನೆ. ಪಂಚನಾಮೆ ಬರೆಯಲು ನಾನು ಮಾಹಿತಿ ನೀಡಿರುತ್ತೇನೆ. ವಿಡಿಯೋ ಮಾಡಿರುವುದನ್ನು ಈ ದಿನ ನನಗೆ ನ್ಯಾಯಾಲಯದಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿ. ಪೋಲಿಸರು ಪಂಚನಾಮೆ ಕಾಲಕ್ಕೆ ಆರೋಪಿಯನ್ನು ಪೋಲಿಸರು ಕರೆದುಕೊಂಡು ರೈಲ್ವೇ ನಿಲ್ದಾಣಕ್ಕೆ ಹೋಗಿ ಪಂಚನಾಮೆ ಮಾಡಿ ಹಿಂದಿರುಗಿ ಠಾಣೆಗೆ ಬರುವವರೆಗೆ ವೀಡಿಯೋ ಚಿತ್ರೀಕರಣ ಮಾಡಿರುತ್ತಾರೆ. ಆದರೆ ಅದನ್ನು ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ ಮತ್ತು ಅದನ್ನು ನಾನು ಈ ದಿನ ನೋಡಿರುವುದಿಲ್ಲ. ನಾನು ಪಂಚನಾಮೆಗೆ ಸಹಿಯನ್ನು ದಿ.29–11–2019 ರಂದು ಮಾಡಿರುತ್ತೇನೆ. ನನ್ನೊಂದಿಗೆ ಇದ್ದ ಇನ್ನೊಬ್ಬ ಪಂಚರ ಹೆಸರು ನನಗೆ ಹೇಳಲು ಬರುವುದಿಲ್ಲ. ನಿಖರವಾಗಿ ಯಾವ ಆರೋಪಿಯಿಂದ ಯಾವ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ಅದೇ ರೀತಿ ನಿಖರವಾಗಿ ಚಿನ್ನ ಎಷ್ಟು ಇತ್ತು ಎಂದು ಹೇಳಲು ಬರುವುದಿಲ್ಲ. ನಿಪಿ–5 ಮತ್ತು 9 ಕ್ಕೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನನಗೆ ಕನ್ನಡ ಓದಲು–ಬರೆಯಲು ಬರುವುದಿಲ್ಲ ಎಂದರೆ ಸರಿ. ಅದಕ್ಕಾಗಿ ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿಲ್ಲ

ಎಂದರೆ ಸಾಕ್ಷಿಯು ನನಗೆ ಓದಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಪಂಚನಾಮೆ ಕಾಲಕ್ಕೆ ಮುರ್ಡೇಶ್ವರ ಪೋಲಿಸರು ಮತ್ತು ರೈಲ್ವೇ ಪೋಲಿಸರು ಇದ್ದರು. ನಾನು ಒಂದು ಅಪಘಾತದ ಪ್ರಕರಣದಲ್ಲಿ ಸಾಕ್ಷಿ ನುಡಿದಿರುತ್ತೇನೆ. ಪಿರ್ಯಾದಿಯು ಪಂಚನಾಮೆ ಕಾಲಕ್ಕೆ ಹಾಜರಿದ್ದ ಬಗ್ಗೆ ನನಗೆ ನೆನಪಿಲ್ಲ. ಪಂಚನಾಮೆಯನ್ನು ಬಂಗಾರಪ್ಪ ಎನ್ನುವ ಪೋಲಿಸರು ಬರೆದಿರಬಹುದು. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿರಲಿಲ್ಲ. ಪೋಲಿಸರು ಸುಳ್ಳಾಗಿ ತಯಾರಿಸಿದ ಪಂಚನಾಮೆಗಳಿಗೆ ಸಹಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಮತ್ತು**
**ಜೆ.ಎಂ.ಎಫ್.ಸಿ., ನ್ಯಾಯಾಲಯ ಭಟ್ಕಳ.**